ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ), ದಾವಣಗೆರೆ.

SJJES
ಸ್ಥಾಪನೆ- 1962

# ವಿದ್ಯಾವರಣ

ವಿಶೇಷ ಪುರವಣಿ ಮಕ್ಕಳ ಮಾಸಪತ್ರಿಕೆ

ದಿನಾಂಕ : 14/05/2026 : www.sjjes.ac.in : info@sjjes.ac.in : +91.8192.277698

## ನರಸರಾಜ ಕ್ಯಾಂಪಸ್‌ನಲ್ಲಿ ಚಿಗುರು ಬೇಸಿಗೆ ಶಿಬಿರದ ಸಮಾರೋಪ




ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ.) ಯ ನರಸರಾಜ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ, ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆ, ಹಾಗೂ ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ (ಆಂಗ್ಲಮಾಧ್ಯಮ) ಹಾಗೂ ಶಿವಣ್ಣ ಚಿಗಟೇರಿ ನರ್ಸರಿ ಶಾಲೆಗಳ ಸಂಯುಕ್ತಾಶ್ರಯದಲ್ಲಿ ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ಒಟ್ಟು ೩ ಬೇಸಿಗೆ ಶಿಬಿರಗಳನ್ನು ದಿನಾಂಕ ೧೧/೦೪/೨೦೨೬ರಿಂದ ೨೮/೦೪/೨೦೨೬ರ ವರೆಗೆ ಒಟ್ಟು ೧೫ ದಿನಗಳ ಕಾಲ ಬೇಸಿಗೆ ಶಿಬಿರಗಳನ್ನು ನಡೆಸಲಾಯಿತು.

ಬೇಸಿಗೆ ಶಿಬಿರದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಅನುಕೂಲವಾಗುವಂತಹ ಕುಂಬಾರಿಕೆ, ಸಂಗೀತ, ಕಂಪ್ಯೂಟರ್, ಗಾಂಧಾರಿ ಕಲೆ, ಸ್ಪೋಕನ್ ಇಂಗ್ಲೀಷ್, ಮನೋರಂಜನಾ ಆಟಗಳು, ಕ್ರಾಫ್ಟ್, ಫೈರ್ ಲೆಸ್ ಕುಕಿಂಗ್, ಮಕ್ಕಳ ಸಂತೆ, ರೈನ್ ಡ್ಯಾನ್ಸ್, ವೇಷಭೂಷಣ, ಮಾತೃವಂದನಾ, ಹೀಗೆ ಹತ್ತು ಹಲವು ಜೂನಿಯರ್ ಮತ್ತು ಸೀನಿಯರ್ ವಿಭಾಗದಲ್ಲಿ ಚಟುವಟಿಕೆಗಳನ್ನು ನಡೆಸಿ ಶಿಬಿರವನ್ನು ಉಪಯುಕ್ತಗೊಳಿಸಲಾಯಿತು.

ದಿನಾಂಕ ೨೮/೦೪/೨೦೨೬ರಂದು ಚಿಗುರು ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗುರುಬಸಮ್ಮ ವಿ. ಚಿಗಟೇರಿ ಆಂಗ್ಲಮಾಧ್ಯಮ ಪ್ರೌಢಶಾಲೆಯ ಮುಖ್ಯಶಿಕ್ಷಕರಾದ ಶ್ರೀಯುತ ಹೆಚ್ ನಿಂಗಪ್ಪ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಸ್ಥೆಯ ಕಾರ್ಯದರ್ಶಿ ಶ್ರೀಯುತ ಮನೋಹರ್ ಎಸ್. ಚಿಗಟೇರಿ, ಎನ್.ಆರ್. ಕ್ಯಾಂಪಸ್‌ನ ಶೈಕ್ಷಣಿಕ ಸಲಹೆಗಾರರಾದ ಶ್ರೀಯುತ ಎಂ.ಟಿ. ಮಳಗಿ, ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕರಾದ ಶ್ರೀಮತಿ ವೀರಮ್ಮ ಎಂ.ಎಸ್. ಉಪಸ್ಥಿತರಿದ್ದರು. ಶ್ರೀಯುತ ಎಂ.ಟಿ. ಮಳಗಿಯವರು ಸಮಾರೋಪ ನುಡಿಗಳನ್ನು ಆಡಿ ಮಕ್ಕಳಿಗೆ ಬೇಸಿಗೆ ಶಿಬಿರದ ಮಹತ್ವ ಮತ್ತು ಉಪಯೋಗವನ್ನು ತಿಳಿಸಿಕೊಟ್ಟರು. ಶಿಬಿರಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಸಂಪೂರ್ಣ ಕಾರ್ಯಕ್ರಮವನ್ನು ಶಿಬಿರಾರ್ಥಿಗಳೇ ಅಯೋಜಿಸಿ, ನಿರ್ವಹಿಸಿ ಯಶಸ್ವಿಗೊಳಿಸಿದರು. ಶಿಬಿರದ ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಶಿಬಿರದ ಪ್ರಮಾಣ ಪತ್ರಗಳನ್ನು ಮುಖ್ಯ ಅತಿಥಿಗಳು ವಿತರಿಸಿದರು. ನಂತರ ಎಲ್ಲಾ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಲಾಯಿತು.

## ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ರವರ ಜನ್ಮದಿನಾಚರಣೆ



"ಮನುಷ್ಯ ಅಭಿವೃದ್ಧಿ ಮಾನವ ಜನಾಂಗದ ಅಂತಿಮ ಗುರಿಯಾಗಿರಬೇಕು." ಭಾರತೀಯ ರಾಜಕಾರಣಿ ಮತ್ತು ಸಮಾಜ ಸುಧಾರಕ ಬಿ. ಆರ್. ಅಂಬೇಡ್ಕರ್ ರವರ ಸ್ಮರಣಾರ್ಥವಾಗಿ ಏಪ್ರಿಲ್ 14 ರಂದು ಅವರ ಜಯಂತಿಯನ್ನು ಆಚರಿಸಲಾಗುತ್ತದೆ. ಇವರು 1891 ಏಪ್ರಿಲ್ 14 ರಂದು ಮಧ್ಯಪ್ರದೇಶದ ಮಹೋ ಎಂಬಲ್ಲಿ ರಾಮ್‌ಜೀ ಸಕ್ಪಾಲ್ ಮತ್ತು ಭೀಮಾಬಾಯಿ ಅವರ ಮಗನಾಗಿ ಜನಿಸಿದರು.

'ಸಂವಿಧಾನ ಶಿಲ್ಪಿ' ಎಂಬ ಹೆಸರನ್ನು ಪಡೆದ ಇವರು ಜಾತಿ ಅಸಮಾನತೆಯ ವಿರುದ್ಧ ಹೋರಾಡಿ ಜನರಿಗೆ ಸೂಕ್ತವಾದ ನ್ಯಾಯವನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸಿದವರು.

ಇವರ ಜನ್ಮ ದಿನಾಚರಣೆಯಂದು ನಮ್ಮ ಶಾಲೆಯಲ್ಲಿ ಅವರ ಫೋಟೋಗೆ ಪೂಜೆಯನ್ನು ಸಲ್ಲಿಸಿ ಗೌರವವನ್ನು ಸೂಚಿಸಲಾಯಿತು.

# ಜಿ.ವಿ.ಸಿ.ಹೆಚ್.ಎಸ್. ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ. ಫಲಿತಾಂಶ




ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ವನಿರ್ಣಯ ಮಂಡಲಿ, ಬೆಂಗಳೂರು ಇವರು ೨೦೨೫–೨೬ನೇ ಸಾಲಿನ ನಡೆಸಿದ ಎಸ್.ಎಸ್.ಎಲ್.ಸಿ. ಪರೀಕ್ಷೆ ೧ ಕ್ಕೆ ನಮ್ಮ ಶಾಲೆಯಿಂದ ಒಟ್ಟು ೭೧ ವಿದ್ಯಾರ್ಥಿಗಳು ಹಾಜರಾಗಿದ್ದರು. ಪರೀಕ್ಷೆ ಫಲಿತಾಂಶ ದಿನಾಂಕ ೨೩/೦೪/೨೦೨೬ರಂದು ಪ್ರಕಟಗೊಂಡಿದ್ದು, ನಮ್ಮ ಶಾಲೆಗೆ ಶೇ. ೮೩.೦೯ ಫಲಿತಾಂಶ ಬಂದಿದೆ. ವಿಶೇಷ ದರ್ಜೆಯಲ್ಲಿ ೪, ಪ್ರಥಮ ಶ್ರೇಣಿಯಲ್ಲಿ ೨೪, ದ್ವಿತೀಯ ಶ್ರೇಣಿಯಲ್ಲಿ ೧೩, ತೃತೀಯ ಶ್ರೇಣಿಯಲ್ಲಿ ೧೮ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸದರಿ ಪರೀಕ್ಷೆಯಲ್ಲಿ ಕು. ತಬಸುಮ್ ನಾಜ್ ಶೇ. ೯೩.೬೦( ೫೮೫), ಕು. ಧನುಶ್ರೀ ಪಿ. ಶೇ. ೯೧.೩೬ (೫೭೧), ಕು.ಪವಿತ್ರ ಹೆಚ್.ಪಿ. ೮೯.೭೬(೫೬೧) ಕು. ಸೋನು ಎನ್. ಶೇ.೮೫.೬೦ (೫೩೫), ಕು. ಮಣಿಕಂಠ ಎಂ. ಶೇ.೮೪.೬೪ (೫೨೯) ಕು. ಅಮೋಘ್ ಎಂ.ಬಿ. ಶೇ.೮೨.೨೪ (೫೧೪) ಕು. ಚೇತನ್ ಎಂ.ಬಿ. ಶೇ. ೮೦.೬೦ (೫೧೦) ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿರುತ್ತಾರೆ.

# ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಫಲಿತಾಂಶ




2026-27ನೇ ಶೈಕ್ಷಣಿಕ ಸಾಲಿನ ಹತ್ತನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ವಿದ್ಯಾರ್ಥಿನಿಯರು ಗಮನಾರ್ಹ ಸಾಧನೆ ಮಾಡಿದ್ದಾರೆ. ಉತ್ತಮ ಫಲಿತಾಂಶವನ್ನು ತಂದುಕೊಡುವ ಮೂಲಕ ಶಾಲೆ ಹಾಗೂ ಸಂಸ್ಥೆಗ ಕೀರ್ತಿ ತಂದಿದ್ದಾರೆ.

ಈ ಬಾರಿ ಉನ್ನತ ಶ್ರೇಣಿಯಲ್ಲಿ 6 ವಿದ್ಯಾರ್ಥಿನಿಯರು, ಪ್ರಥಮ ಶ್ರೇಣಿಯಲ್ಲಿ 18 ವಿದ್ಯಾರ್ಥಿನಿಯರು, ಉತ್ತೀರ್ಣರಾಗಿದ್ದು, ದ್ವಿತೀಯ ಶ್ರೇಣಿಯಲ್ಲಿ 19 ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿದ್ದಾರೆ. ಒಟ್ಟು 64 ವಿದ್ಯಾರ್ಥಿನಿಯರು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಶಾಲೆಯ ಒಟ್ಟು ಫಲಿತಾಂಶ ಶೇಕಡಾ 81ರಷ್ಟಿದ್ದು, ಇದು ಶಾಲೆಯ ಶಿಕ್ಷಣದ ಗುಣಮಟ್ಟ ಮತ್ತು ಶಿಕ್ಷಕರ ಪರಿಶ್ರಮಕ್ಕೆ ಸಾಕ್ಷಿಯಾಗಿದೆ. ಈ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಶಿಕ್ಷಕರು ಮತ್ತು ಪೋಷಕರು ಸಂತಸ ವ್ಯಕ್ತಪಡಿಸಿದ್ದಾರೆ.

# 2025–26 ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಫಲಿತಾಂಶ

2025–26 ನೇ ಸಾಲಿನ 10ನೇ ತರಗತಿ ವಾರ್ಷಿಕ ಪರೀಕ್ಷಾ ಫಲಿತಾಂಶವು ಏಪ್ರಿಲ್ 23 ರಂದು ಬಂದಿರುತ್ತದೆ. ಈ ಸಾಲಿನಲ್ಲಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ವಿದ್ಯಾರ್ಥಿಗಳು ಶೇ.90.56 ಫಲಿತಾಂಶ ಪಡೆದಿರುತ್ತಾರೆ.

ಅತ್ಯುನ್ನತ ಶ್ರೇಣಿಯಲ್ಲಿ ಫಲಿತಾಂಶ ಪಡೆದ ವಿದ್ಯಾರ್ಥಿಗಳ ವಿವರ :

| ವಿದ್ಯಾರ್ಥಿಯ ಹೆಸರು | ಅಂಕಗಳು | ಶೇಕಡಾವಾರು (%) |
|---|---|---|
| 1. ಅಪೇಕ್ಷ ಎಂ. ಶೇಟ್ | 556 | 88.96% |
| 2. ಪ್ರೀತಮ್ ಪಿ. | 552 | 88.32% |
| 3. ಅಂಕಿತಾ ಎನ್ ಹುಗ್ಗಿ | 532 | 85.12% |



ಅಪೇಕ್ಷ ಎಂ. ಶೇಟ್
(88.96%)



ಪ್ರೀತಮ್ ಪಿ.
(88.32%)



ಅಂಕಿತಾ ಎನ್ ಹುಗ್ಗಿ
(85.12%)

- 19 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.
- ಶಾಲೆಯ ಒಟ್ಟು ಫಲಿತಾಂಶವು 90.56% ಆಗಿದ್ದು, ಅತ್ಯಂತ ಉತ್ತಮ ರೀತಿಯಲ್ಲಿ ಬಂದಿದೆ.

ಅಭಿನಂದನೆಗಳು: ಈ ಎಲ್ಲಾ ಮಕ್ಕಳಿಗೆ ಶುಭವಾಗಲಿ ಎಂದು ನಮ್ಮ ಸಂಸ್ಥೆಯ ಕಾರ್ಯದರ್ಶಿಗಳಾದ ಮನೋಹರ್ ಎಸ್ ಚಿಗಟೇರಿ ರವರು ಶೈಕ್ಷಣಿಕ ಸಲಹೆಗಾರರಾದ ವಾಗ್ದೇವಿ ಮೇಡಂ ರವರು ಹಾಗೂ ನಮ್ಮ ಶಾಲೆಯ ಸಿಬ್ಬಂದಿ ವರ್ಗದವರು ಹಾರೈಸಿದ್ದಾರೆ.ಎಲ್ಲಾ ಶಿಕ್ಷಕರು ಶುಭವನ್ನು ಕೋರಿರುತ್ತಾರೆ.

## ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ ಹಾಗೂ ಶ್ರೀ ವೀರಭದ್ರಪ್ಪ ಎಂ. ಚಿಗಟೇರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಂದ ರಾಷ್ಟ್ರಮಟ್ಟದ ನಾಟಕ ಪ್ರದರ್ಶನದಲ್ಲಿ ಅದ್ಭುತ ಸಾಧನೆ



ವಿಶ್ವ ರಂಗಭೂಮಿ ದಿನದ ಅಂಗವಾಗಿ ದಾವಣಗೆರೆಯ ದೃಶ್ಯಕಲಾ ಮಹಾವಿದ್ಯಾಲಯದ ಬಯಲು ರಂಗಮಂದಿರದಲ್ಲಿ ಏರ್ಪಡಿಸಿದ ರಾಷ್ಟ್ರಮಟ್ಟದ ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ ದಿನಾಂಕ 19.04.2026 ರಂದು ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಅತ್ಯಂತ ಯಶಸ್ವಿಯಾಗಿ ಭಾಗವಹಿಸಿ ಗಮನ ಸೆಳೆದರು.

ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ವಿದ್ಯಾರ್ಥಿಗಳು ಹಾಗೂ ಶ್ರೀ ವೀರಭದ್ರಪ್ಪ ಎಂ. ಚಿಗಟೇರಿ ಪ್ರಾಥಮಿಕ ಶಾಲೆಯ ಮಕ್ಕಳು "ಹಾಡುವ ಹಕ್ಕಿ" ಮತ್ತು "ನನ್ನ ಗೋಪಾಲ" ಎಂಬ ನಾಟಕಗಳನ್ನು ಮನಮುಟ್ಟುವ ರೀತಿಯಲ್ಲಿ ಪ್ರದರ್ಶಿಸಿದರು. ನಾಟಕದ ಪ್ರತಿಯೊಂದು ಪಾತ್ರಕ್ಕೂ ತಕ್ಕಂತೆ ವಿದ್ಯಾರ್ಥಿಗಳು ಜೀವಂತ ಅಭಿನಯ ನೀಡಿದ್ದು, ಪ್ರೇಕ್ಷಕರಿಂದ ಭಾರೀ ಪ್ರಶಂಸೆಗೆ ಪಾತ್ರವಾಯಿತು.









ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ, ವೇದಿಕೆ ಮೇಲೆ ಆತ್ಮವಿಶ್ವಾಸ ಹಾಗೂ ಕಲಾತ್ಮಕತೆಯನ್ನು ತೋರಿದರು. ನಾಟಕ ವೀಕ್ಷಿಸಿದ ಪೋಷಕರು, ಶಿಕ್ಷಕರು ಮತ್ತು ಕಲಾಭಿಮಾನಿಗಳು ಮಕ್ಕಳ ಅಭಿನಯವನ್ನು ಹೃದಯಪೂರ್ವಕವಾಗಿ ಮೆಚ್ಚಿದರು.

ಈ ನಾಟಕ ಪ್ರದರ್ಶನದ ಮೂಲಕ ವಿದ್ಯಾರ್ಥಿಗಳಲ್ಲಿ ಸಹಕಾರ ಮನೋಭಾವ, ವೇದಿಕೆ ಭಯ ನಿವಾರಣೆ, ಸೃಜನಾತ್ಮಕ ಚಿಂತನೆ ಹಾಗೂ ಕಲೆಯ ಮೇಲಿನ ಆಸಕ್ತಿ ಹೆಚ್ಚುವಂತೆ ಮಾಡಲಾಗಿದೆ. ರಾಷ್ಟ್ರಮಟ್ಟದ ವೇದಿಕೆಯಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿರುವುದು ಸಂಸ್ಥೆಗೆ ಮತ್ತು ಶಾಲೆಗೆ ಹೆಮ್ಮೆ ತರುವ ಸಂಗತಿಯಾಗಿದೆ.

## ವಿಶ್ವ ಪುಸ್ತಕ ದಿನ – ಏಪ್ರಿಲ್ 23

"ಅಜ್ಞಾನ ನಿಮ್ಮಲ್ಲಿ ಭಯವನ್ನುಂಟು ಮಾಡಿದರೆ,

ಭಯ ನಿಮ್ಮಲ್ಲಿ ಅಜ್ಞಾನವನ್ನುಂಟು ಮಾಡುತ್ತದೆ.

ಈ ಎರಡನ್ನು ಓಡಿಸುವ ಏಕೈಕ ಅಸ್ತ್ರ ವಿದ್ಯೆ." **– ಡಾ. ಬಿ. ಆರ್ ಅಂಬೇಡ್ಕರ್**

ಪುಸ್ತಕಗಳು ನಮ್ಮ ಬೆಸ್ಟ್ ಫ್ರೆಂಡ್ಸ್ ಅಷ್ಟೇ ಅಲ್ಲ, ಒಬ್ಬೊಬ್ಬರಿಗೆ ಫಿಲಾಸಫರ್, ಮಾರ್ಗದರ್ಶಕ, ಒಳ್ಳೆಯ ಉದ್ದೇಶಗಳಿಗೆ ಗೈಡ್. ಉತ್ತಮ ಒಡನಾಡಿ ಸಹ. ಪ್ರಸ್ತುತ ಇಡೀ ಪ್ರಪಂಚವೇ ಹೆಸರನ್ನು ಪಡೆಯುವಂತೆ ಈ ಪುಸ್ತಕಗಳು ಜ್ಞಾನವನ್ನು ಒದಗಿಸುತ್ತವೆ. ಜನರಿಗೆ ಅವರ ಏಕಾಂಗಿತನ ಕಾಡದಂತೆ ಕಾಪಾಡುತ್ತಿರುವ ಒಡನಾಡಿ ಪುಸ್ತಕ.

ಪುಸ್ತಕಗಳು ನಮ್ಮ ಸ್ನೇಹಿತರು ಅಷ್ಟೇ ಅಲ್ಲ, ಪ್ರಮುಖ ಮಾಹಿತಿ ಮೂಲಗಳಾಗಿದ್ದು, ಜೊತೆಗೆ ಮನೋರಂಜನೆ ನೀಡುವ ಮನಸ್ಸಿಗೆ ಶಾಂತಿ ನೀಡುವ ಭಂಡಾರವು ಸಹ ಆಗಿದೆ.

ಪೋಷಕರ ಪುಸ್ತಕದೊಂದಿಗಿನ ಬಾಂಧವ್ಯವವು ಓದುವ ಹವ್ಯಾಸವನ್ನು ಪ್ರಮೋಟ್ ಮಾಡಲು ವಿಶ್ವ ಪುಸ್ತಕ ದಿನವನ್ನೇ ಆಚರಣೆ ಮಾಡಲಾಗುತ್ತದೆ. ಪ್ರಪಂಚದ ಇತಿಹಾಸ ಮತ್ತು ಭವಿಷ್ಯಗಳ ಸೇತುವೆಯಾಗಿ ಪುಸ್ತಕಗಳು ಪಾತ್ರವಹಿಸುತ್ತವೆ.

# ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢ ಶಾಲೆ (ದಾವಣಗೆರೆ)

## ಬೇಸಿಗೆ ಶಿಬಿರ ಅನಿಸಿಕೆ

**1.**

ಈ ಶಾಲೆಯಲ್ಲಿ ನಡೆಯುತ್ತಿರುವ ಬೇಸಿಗೆ ಶಿಬಿರಕ್ಕೆ ನಾನು ಸೇರಿದ್ದೇನೆ. ಬೇಸಿಗೆ ಶಿಬಿರದಲ್ಲಿ ಮೊದಲನೇ ದಿವಸ ಮಣ್ಣಿನಿಂದ ಮಡಿಕೆ ಮಾಡುವುದನ್ನು ಕಲಿಸಿದರು. ಅದರಲ್ಲಿ ನಾನು ಭಾಗಿಯಾಗಿದ್ದೇನೆ. ಅದರಲ್ಲಿ ನಾನು ಮಡಿಕೆ ಮಾಡುವುದನ್ನು ಕಲಿತುಕೊಂಡೆ. ಮಣ್ಣಿನ ಮಡಿಕೆಯನ್ನು ಕಲಿಸಿಕೊಟ್ಟ ಸರ್ ತುಂಬಾ ಚೆನ್ನಾಗಿ ಕಲಿಸಿಕೊಟ್ಟರು. ಅವರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ ಮತ್ತು ಎಲ್ಲರೂ ಮಣ್ಣಿನ ಮಡಿಕೆ ಮಾಡುವುದನ್ನು ಕಲಿತುಕೊಂಡರು.

ಬೇಸಿಗೆ ಶಿಬಿರದ ಎರಡನೇ ದಿವಸ ಪೇಪರ್ ಕಟಿಂಗ್ ಇದನ್ನು ಕಲಿಸಿಕೊಡಲು ಶ್ರೀಮತಿ ಗೌರಿ ಮೇಡಂ ಅವರು ಪೇಪರ್ ಕಟಿಂಗ್ ಅನ್ನು ತುಂಬಾ ಚೆನ್ನಾಗಿ ಕಲಿಸಿಕೊಟ್ಟರು. ಅದರಲ್ಲಿ ಹೂವನ್ನು ಮಾಡುವುದನ್ನು ಕಲಿಸಿದ್ದರು ಮತ್ತು ಪೇಪರ್ ಡಿಸೈನ್ ಮಾಡುವುದನ್ನು ಕಲಿಸಿದ್ದರು. ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಬೇಸಿಗೆ ಶಿಬಿರದ ಮೂರನೇ ದಿವಸ Computer ಕ್ಲಾಸ್ ಇದನ್ನು ಶ್ವೇತಾ ಮೇಡಂ ಅವರು Computer ಅನ್ನು ಕಲಿಸಿಕೊಟ್ಟರು. ಅದರಲ್ಲಿ Scan ಉಪಯೋಗಿಸುವುದನ್ನು ಕಲಿಸಿದರು, Auto Drawing ಮಾಡುವುದನ್ನು ಕಲಿಸಿದರು. ತುಂಬಾ ಚೆನ್ನಾಗಿ ಕಲಿಸಿಕೊಟ್ಟರು. ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ.

ಬೇಸಿಗೆ ಶಿಬಿರದ ನಾಲ್ಕನೇ ದಿವಸ ಗಾಂಧಾರಿ ವಿದ್ಯೆ ಇದನ್ನು ಕಲಿಸಿಕೊಡಲು ವೀರೇಶ್ ಸರ್ ಅವರ ಟೀಮ್ ಬಂದಿತ್ತು. ಅವರು ಸ್ವಲ್ಪ ಸಮಯ ಧ್ಯಾನವನ್ನು ಮಾಡಿಸಿದ್ದರು ಮತ್ತು ಗಾಂಧಾರಿ ವಿದ್ಯೆಯ 'Skills' ಅನ್ನು ಕಲಿಸಿದ್ದರು. ವೀರೇಶ್ ಸರ್ ಟೀಮ್‌ಗೆ ಧನ್ಯವಾದಗಳು.

ಬೇಸಿಗೆ ಶಿಬಿರದ ಐದನೇ ದಿವಸ ಕೂಡ ಗಾಂಧಾರಿ ವಿದ್ಯೆ ಇದನ್ನು ಕಲಿಸಲು ವೀರೇಶ್ ಸರ್ ಅವರ ಟೀಮ್‌ನ ಒಬ್ಬರು ನಮಗೆ ಗಾಂಧಾರಿ ವಿದ್ಯೆಯನ್ನು ಕಲಿಸಿದ್ದರು. ಅವರು ನಮಗೆ ತುಂಬಾ ಚೆನ್ನಾಗಿ ಕಲಿಸಿದರು. ಅವರು ನಮಗೆ ಕಣ್ಣಿಗೆ ಬಟ್ಟೆ ಕಟ್ಟಿ ಕೈಯಲ್ಲಿ ಬಾಲ್ ಕೊಟ್ಟು ಯಾವ ಬಣ್ಣದ ಬಾಲ್ ಎಂದು ಕೇಳುತ್ತಿದ್ದರು. ನಾವು ಅದರಲ್ಲೂ ಭಾಗವಹಿಸಿದ್ದೇವೆ. ಮ್ಯಾಮ್ ನಮಗೆ ಇನ್ನೊಂದು ಬಾರಿ ಗಾಂಧಾರಿ ವಿದ್ಯೆಯನ್ನು ಮಾಡಿಸಿದರು.

ಬೇಸಿಗೆ ಶಿಬಿರದ ಆರನೇ ದಿವಸ ಗ್ಲಾಸ್ ಪೇಂಟಿಂಗ್ ಕಲಿತೆವು. ಸರ್ ಅವರು ತುಂಬಾ ಚೆನ್ನಾಗಿ ಗ್ಲಾಸ್ ಪೇಂಟಿಂಗ್ ಅನ್ನು ಕಲಿಸಿದ್ದರು. ನಾನು ಗ್ಲಾಸ್ ಪೇಂಟಿಂಗ್ ಮಾಡುವುದನ್ನು ಕಲಿತುಕೊಂಡೆ. ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ.

ಬೇಸಿಗೆ ಶಿಬಿರದ ಏಳನೇ ದಿವಸ Spoken English ಇದನ್ನು ಲಿಂಗರಾಜ್ ಸರ್ ಮತ್ತು ರಶ್ಮಿ ಮೇಡಂ ಅವರು ತೆಗೆದುಕೊಂಡರು. ನಮಗೆ ತುಂಬಾ ಖುಷಿಯಾಯಿತು. ಈ ಕ್ಲಾಸ್ ತುಂಬಾ ಚೆನ್ನಾಗಿ ಕಲಿಸಿದರು. ಮೇಡಂ ಮತ್ತು ಸರ್‌ಗೆ ಧನ್ಯವಾದಗಳು.

ಸಾಮಾಜಿಕ ದಿಕ್ಸೂಚಿ ಇದನ್ನು ಕಲಿಸಲು ಜಯಲಕ್ಷ್ಮಿ ಮೇಡಂ ಹಾಗೂ ಅವರ ಟೀಮ್ ಬಂದಿದ್ದರು. ಸಾಮಾಜಿಕ ದಿಕ್ಸೂಚಿ ಅಂದರೆ ತೊಂದರೆ ಆದಾಗ ಹೇಗೆ ಕೆಲಸ ಮಾಡಬೇಕು ಎಂದು ತಿಳಿಸಿದರು.

ಮಕ್ಕಳಿಗೆ ಸಂಕಷ್ಟ ಬಂದಾಗ, ಪ್ರಾಣಿ, ಪಕ್ಷಿಗಳಿಗೆ ತೊಂದರೆ ಆದಾಗ ಏನು ಮಾಡಬೇಕು ಎಂಬ ಬಗ್ಗೆ ತಿಳಿಸಿದರು. ಜಯಲಕ್ಷ್ಮಿ ಮೇಡಂ ಮತ್ತು ಅವರ ಟೀಮ್‌ಗೆ ಧನ್ಯವಾದಗಳನ್ನು ಹೇಳುತ್ತೇನೆ.

**ವಿದ್ಯಾರ್ಥಿಯ ಹೆಸರು: ನಿಖಿತಾ ಕೆ . ಎಂ**
**ತರಗತಿ: 9 ನೇ ತರಗತಿ**
**ದಿನಾಂಕ: 18/04/2026**

**2**. ನನಗೆ ಈ ಬೇಸಿಗೆ ಶಿಬಿರವು  ತುಂಬಾ ಇಷ್ಟ ಆಗಿದೆ. ಈ ಬೇಸಿಗೆ ಶಿಬಿರದಲ್ಲಿ ತುಂಬಾ ವಿಷಯಗಳನ್ನು ಕಲಿತಿದ್ದೇನೆ. ಕುಂಬಾರಿಕೆ ಕಲಿಕೆ, ಗಾಂಧಾರಿ ಕಲೆ, Spoken English class, Fun games, Craft paper cutting, Fevicryl glass colors, ಜನಪದ ಹಾಡುಗಳು, ನವರಸಗಳ ಪರಿಚಯ, Computer ಕಲಿಕೆ, Face mask, ಧ್ಯಾನ – ಹೀಗೆ ವಿವಿಧ ಚಟುವಟಿಕೆಗಳಲ್ಲಿ ನಾವು ಭಾಗವಹಿಸಿದ್ದೇವೆ.

ಬೆಂಕಿ ರಹಿತ ಅಡುಗೆ ಸೇರಿದಂತೆ ಎಲ್ಲಾ ಚಟುವಟಿಕೆಗಳು ನನಗೆ ತುಂಬಾ ಇಷ್ಟ ಆಗಿದೆ. ನಾವು ಬಿಸಿಲಿನಲ್ಲಿ ಆಟ ಆಡುವ ಬದಲು ಹೀಗೆ ಶಾಲೆಗೆ ಬಂದು ವಿವಿಧ ವಿಷಯಗಳನ್ನು ಕಲಿಯಬಹುದು.

**ಹೆಸರು: ವೇದ . ಜಿ ಪಿ**
**ತರಗತಿ: 10 ನೇ ತರಗತಿ**

# ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ

ದಿನಾಂಕ: 27–04–2026

ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ 2025–26 ನೇ ಸಾಲಿನ ಬೇಸಿಗೆ ಶಿಬಿರವು ದಿನಾಂಕ 11–4–2026 ರಿಂದ 27–4–2026 ರವರೆಗೆ ನಡೆಸಲಾಯಿತು. ಈ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭಕ್ಕೆ ನಮ್ಮ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನಾಗರಾಜ ಎಸ್ ರವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಹಾಗೂ ಶೈಕ್ಷಣಿಕ ಸಲಹೆಗಾರರಾದ ವಾಗ್ದೇವಿ ಮೇಡಂ ಮತ್ತು ಶ್ರೀ ವೀರಭದ್ರಪ್ಪ ಎಂ ಬಿಗಟೇರಿ, ನರ್ಸರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿಯಾದ ಶ್ರೀಮತಿ ಶೈಲಜಾ ಮೇಡಂ ರವರು ಹಾಗೂ CRP ಸರ್ ಶ್ರೀ ಮುರುಳಿಸಿದ್ದಾಚಾರ್ಯರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮೊದಲಿಗೆ ಮೋನಿಕಾ ಎಂಬ ವಿದ್ಯಾರ್ಥಿನಿ ಪ್ರಾರ್ಥನೆ ಮಾಡಿದರು, ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳು ಮಾತನಾಡಿದರು. ನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರನ್ನೂ ಶ್ರೀ ಜಿ ಎಂ ಪ್ರಭುದೇವ ರವರು ಸ್ವಾಗತಿಸಿದರು.

ಈ ಒಂದು ಕಾರ್ಯಕ್ರಮವನ್ನು ಉದ್ದೇಶಿಸಿ ಶ್ರೀ ಮುರುಳಿಸಿದ್ದಾಚಾರ್ಯ ರವರು ಬೇಸಿಗೆ ಶಿಬಿರ ಎಂಬುದು ರಜೆಯನ್ನು ಯಾವ ರೀತಿಯಾಗಿ ಸದುಪಯೋಗ ಪಡಿಸಿಕೊಳ್ಳಬೇಕು ಎಂಬುದರ ಬಗ್ಗೆ ತಿಳಿಸಿಕೊಟ್ಟರು.ಈ ಶಿಬಿರದಿಂದ ಅನೇಕ ರೀತಿಯ ಚಟುವಟಿಕೆಗಳನ್ನು ಕಲಿಯಲು ನಮಗೆ ತುಂಬಾ ಅವಕಾಶವಿರುತ್ತದೆ. ಇದರಿಂದ ನಮ್ಮ ಜ್ಞಾನ ಹೆಚ್ಚುತ್ತಾ ಹೋಗುತ್ತದೆ ಎಂದು ತಿಳಿಸಿದರು.

ಹಾಗೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಾಗ್ದೇವಿ ಮೇಡಂ ಮತ್ತು ನಾಗರಾಜ್ ಸರ್, ಶೈಲಜಾ ಮೇಡಂ ರವರು ಮಕ್ಕಳ ಕುರಿತು ಹಿತನುಡಿಗಳನ್ನು ಹೇಳಿದರು. ನಂತರ ಶಿಬಿರಕ್ಕೆ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಅಭಿನಂದನಾ ಪ್ರಮಾಣಪತ್ರವನ್ನು ನೀಡಲಾಯಿತು. ಪ್ರಾಥಮಿಕ ಮತ್ತು ಪ್ರೌಢಶಾಲೆಯ ಎಲ್ಲಾ ಶಿಕ್ಷಕರು ಈ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕೊನೆಯದಾಗಿ ಪ್ರದೀಪ್ ವೈ ಕೆ ಸರ್ ರವರು ವಂದನಾರ್ಪಣೆಯನ್ನು ಸಲ್ಲಿಸಿದರು.ಈ ಶಿಬಿರದಿಂದ ಅನೇಕ ರೀತಿಯ ಚಟುವಟಿಕೆಗಳನ್ನು ಕಲಿಯಲು ನಮಗೆ ತುಂಬಾ ಅವಕಾಶವಿರುತ್ತದೆ. ಇದರಿಂದ ನಮ್ಮ ಜ್ಞಾನ ಹೆಚ್ಚುತ್ತಾ ಹೋಗುತ್ತದೆ ಎಂದು ತಿಳಿಸಿದರು.

ಹಾಗೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಾಗ್ದೇವಿ ಮೇಡಂ ಮತ್ತು ನಾಗರಾಜ್ ಸರ್, ಶೈಲಜಾ ಮೇಡಂ ರವರು ಮಕ್ಕಳ ಕುರಿತು ಹಿತನುಡಿಗಳನ್ನು ಹೇಳಿದರು. ನಂತರ ಶಿಬಿರಕ್ಕೆ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಅಭಿನಂದನಾ ಪ್ರಮಾಣಪತ್ರವನ್ನು ನೀಡಲಾಯಿತು. ಪ್ರಾಥಮಿಕ ಮತ್ತು ಪ್ರೌಢಶಾಲೆಯ ಎಲ್ಲಾ ಶಿಕ್ಷಕರು ಈ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕೊನೆಯದಾಗಿ ಪ್ರದೀಪ್ ವೈ ಕೆ ಸರ್ ರವರು ವಂದನಾರ್ಪಣೆಯನ್ನು ಸಲ್ಲಿಸಿದರು.

# ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ವಿದ್ಯಾರ್ಥಿನಿ ದ್ವಿತೀಯ PUC ಯಲ್ಲಿ ರಾಜ್ಯಕ್ಕೆ 10ನೇ rank



2023-24 ನೇ ಸಾಲಿನ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿನಿ ಜೀವಿತ. B, 608 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ, ಮುಂದಿನ ವಿದ್ಯಾಭ್ಯಾಸಕ್ಕಾಗಿ ದಾವಣಗೆರೆ ನಗರದಲ್ಲಿನ ಸೈನ್ಸ್ ಅಕಾಡೆಮಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರವೇಶ ಪಡೆದು 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು 589 ಅಂಕಗಳನ್ನು ಪಡೆದು ಶೇಕಡಾ 98% ಫಲಿತಾಂಶ ಪಡೆದು ರಾಜ್ಯ ಮಟ್ಟದಲ್ಲಿ 10ನೇ ಶ್ರೇಣಿಯಲ್ಲಿ ಉತ್ತೀರ್ಣಳಾಗಿ ನಮ್ಮ ಶಾಲೆಗೆ ಮತ್ತು ಸಂಸ್ಥೆಗೆ ಕೀರ್ತಿ ತಂದಿರುತ್ತಾಳೆ. ಈ ವಿದ್ಯಾರ್ಥಿನಿಗೆ ಎಲ್ಲಾ ಶಿಕ್ಷಕರಿಂದ ಮತ್ತು ಸಂಸ್ಥೆಯ ಆಡಳಿತ ಮಂಡಳಿಯಿಂದ ಹೃತ್ಪೂರ್ವಕ ಅಭಿನಂದನೆಗಳು. ನಿಮ್ಮ ಮುಂದಿನ ವಿದ್ಯಾಭ್ಯಾಸ ಜೀವನದಲ್ಲೂ ಇನ್ನಷ್ಟು ಯಶಸ್ಸುಗಳು ದೊರಕಲಿ ಎಂದು ಹಾರೈಸುತ್ತೇವೆ.

## ಚಿಗುರು ಬೇಸಿಗೆ ಶಿಬಿರ ಯಶಸ್ವಿ



ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ನರಸರಾಜ ಕ್ಯಾಂಪಸ್‌ನಲ್ಲಿ ಏಪ್ರಿಲ್ 11ರಿಂದ ಆರಂಭವಾದ "ಚಿಗುರು ಬೇಸಿಗೆ ಶಿಬಿರ" ಯಶಸ್ವಿಯಾಗಿ ನೆರವೇರಿತು. ವಿದ್ಯಾರ್ಥಿನಿಯರ ಸೃಜನಶೀಲತೆ ಹಾಗೂ ಕೌಶಲ್ಯ ವೃದ್ಧಿಗೆ ಶಿಬಿರ ಸಹಕಾರಿಯಾಯಿತು.

ಕ್ರಾಫ್ಟ್, ಕಂಪ್ಯೂಟರ್, ನವರಸ, ಕುಂಬಾರಿಕೆ ಹಾಗೂ ಗಾಂಧಾರಿ ಕಲೆ ಸೇರಿದಂತೆ ವಿವಿಧ ತರಬೇತಿಗಳು ನೀಡಲಾಯಿತು. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಫನ್ ಗೇಮ್ಸ್, ಮೆಮೊರಿ ಟೆಸ್ಟ್, ಸಂಗೀತ, ಸ್ಪೋಕನ್ ಇಂಗ್ಲಿಷ್ ಹಾಗೂ ಫೈರ್‌ಲೆಸ್ ಕುಕಿಂಗ್ ಕಾರ್ಯಕ್ರಮಗಳು ವಿದ್ಯಾರ್ಥಿನಿಯರಲ್ಲಿ ಉತ್ಸಾಹ ಮೂಡಿಸಿವೆ.

ಏಪ್ರಿಲ್ 27ರಂದು ಸಮಾರೋಪಗೊಂಡ ಶಿಬಿರದಲ್ಲಿ ನರಸರಾಜ ಕ್ಯಾಂಪಸ್‌ನ ಎಲ್ಲಾ ಶಿಕ್ಷಕರು ಸಕ್ರಿಯವಾಗಿ ಭಾಗವಹಿಸಿ ಶಿಬಿರದ ಯಶಸ್ಸಿಗೆ ಕೈಜೋಡಿಸಿದರು. ಶಾಲಾ ಆಡಳಿತ ಮಂಡಳಿ ಮತ್ತು ಶಿಕ್ಷಕರು ಶಿಬಿರದ ಯಶಸ್ಸಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## ಚಿಗುರು ಬೇಸಿಗೆ ಶಿಬಿರದ ಝಲಕ್






JAN
FEB
MAR
APR
MAY
JUN


GPS Map Camera
Davanagere, Karnataka, India
Fwcg+r2x, Sh 65, Mandipet, Davanagere, Karnataka
577001, India
Lat 14.472467° Long 75.924889°

ಶ್ರೀ ಜಗದ್ಗುರು ಜಯ ವಿಭವ ವಿದ್ಯಾಸಂಸ್ಥೆಯು ಪ್ರತಿ ವರ್ಷ ನಡೆಸುತ್ತಿರುವ ಚಿಗುರು ಬೇಸಿಗೆ ಶಿಬಿರವನ್ನು ಈ ಜಗದ್ಗುರು ಜಯದೇವ ಮುರುಗರಾಜೇಂದ್ರ ಪ್ರೌಢಶಾಲೆ ಹಾಗೂ ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಶಾಲೆಯ ವತಿಯಿಂದ ಚಿಗುರು ಬೇಸಿಗೆ ಶಿಬಿರವನ್ನು ನಡೆಸಲಾಯಿತು . ಈ ಶಿಬಿರದಲ್ಲಿ 50 ವಿದ್ಯಾರ್ಥಿಗಳು ಭಾಗವಹಿಸಿದ್ದರು ಹಾಗೂ ಈ ಶಿಬಿರದಲ್ಲಿ ವಿಶೇಷವಾಗಿ ಗಾಂಧಾರ ಕಲೆ ಕುಂಬಾರಿಕೆ ಮಣ್ಣಿನ ವಿವಿಧ ವಸ್ತುಗಳ ತಯಾರಿಕೆ ಸಂಗೀತ ಚಿತ್ರಕಲೆ ಗಣಿತದ ವಿವಿಧ ಆಕೃತಿಗಳ ತಯಾರಿಕೆ ಧ್ಯಾನ ಮಾಡುವುದು ಮನೋರಂಜನ ಆಟಗಳು ಸ್ಪೋಕನ್ ಇಂಗ್ಲೀಷ್ ಕನ್ನಡ ಇಂಗ್ಲಿಷ್ ಬರವಣಿಗೆ ಇನ್ನು ಮುಂತಾದ ವಿಷಯಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ತರಗತಿಗಳನ್ನು ನಡೆಸಲಾಯಿತು .

ಈ ಚಿಗುರು ಬೇಸಿಗೆ ಶಿಬಿರ ಮುಕ್ತಾಯ ಸಮಾರಂಭದಲ್ಲಿ ವಿನೋಬನಗರ ಕ್ಲಸ್ಟರ್ ನ ಸಿ ಆರ್ ಪಿ ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮರುಳಸಿದಾಚಾರ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಮರುಳಸಿದ್ದಾಚಾರ್ಯ ಅವರು ವಿದ್ಯಾರ್ಥಿಗಳಿಗೆ ಇಂತಹ ಬೇಸಿಗೆ ಶಿಬಿರದ ಉಪಯೋಗವನ್ನು ಎಲ್ಲಾ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು ಹಾಗೂ ಎಲ್ಲ ವಿದ್ಯಾರ್ಥಿಗಳಿಗೂ ಪ್ರಶಸ್ತಿ ಪತ್ರವನ್ನು ನೀಡಿದರು ಈ ಶಿಬಿರ 15 ದಿನಗಳ ಕಾಲ ಅತ್ಯುತ್ತಮವಾಗಿ ನಡೆಯಿತು ವಿಶೇಷವಾಗಿ 15 ದಿನಗಳವರೆಗೆ ಪ್ರತಿದಿನ ಕಂಪ್ಯೂಟರ್ ತರಗತಿ ನಡೆಸಲಾಯಿತು . ಈ ಶಿಬಿರದಲ್ಲಿ ಎಲ್ಲಾ ಶಿಕ್ಷಕರು ಭಾಗವಹಿಸಿ ಶಿಬಿರವು ಯಶಸ್ವಿಯಾಗುವಂತೆ ಸಹಕರಿಸಿದರು ಹಾಗೂ ಕಾರ್ಯದರ್ಶಿಯರಾದ ಶ್ರೀ ಮನೋಹರ್ ಎಸ್ ಚಿಗಟೇರಿ ಯವರು ಹಾಗೂ ವಿನೋಬನಗರ ಕ್ಯಾಂಪಸ್ ನ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ಆರ್ ವಾಗ್ದೇವಿ ಮೇಡಂ ರವರು ಮಕ್ಕಳಿಗೆ ಶುಭ ಹಾರೈಸಿದರು.ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನಾಗರಾಜ್ ರವರು ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯನಿ ಶ್ರೀಮತಿ ಶೈಲಜಾ ಇವರು ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಈ ಶಿಬಿರ ಯಶಸ್ವಿಯಾಗಿ ನಡೆಯಲು ಸಹಕರಿಸಿದ ಎಲ್ಲಾ ಶಿಕ್ಷಕ ವೃಂದದವರಿಗೂ ಹೃದಯಪೂರ್ವಕ ಧನ್ಯವಾದಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೂ ಹೃದಯ ಪೂರ್ವಕ ಧನ್ಯವಾದಗಳು.

ಶ್ರೀಮತಿ ಶೈಲಜಾ ಎಸ್‌ಎಂ
ಮುಖ್ಯೋಪಾಧ್ಯಾಯನಿ
ಎಸ್ ವಿ ಎಂ ಸಿ ಎಚ್ ಪಿ ಎಸ್

## ಚಿಗುರು ಬೇಸಿಗೆ ಶಿಬಿರದ ಝಲಕ್














































Samsung Quad Camera
Shot with my Galaxy A12




Samsung Quad Camera
Shot with my Galaxy A12